RNU AIR DHARWAD

DECEMBER 26, 2024

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ಬೆಳಗಾವಿಯಲ್ಲಿ ಇಂದು,** ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ, 'ನವ ಸತ್ಯಾಗ್ರಹ ಬೈಠಕ್' ಹಾಗೂ 'ಜೈ ಬಾಪು, ಜೈ ಭೀಮ್, ಜೈ ಸಂವಿಧಾನ' ಜಾಥಾ.
- **ದುಡಿಯುವ ವರ್ಗಗಳ ಮಹಿಳೆಯರ** ಆರ್ಥಿಕ ಸಬಲೀಕರಣಕ್ಕಾಗಿ, "ಅಸ್ಮಿತೆ ವ್ಯಾಪಾರ ಮೇಳ".
- **ಮಹಿಳೆಯರ ಘನತೆಯ ಬದುಕು,** ಅಭಿವೃದ್ಧಿಯ ಮಾನದಂಡ – ಸಚಿವ ಪ್ರಿಯಾಂಕ್ ಖರ್ಗೆ.
- **ವಿಜಯನಗರ ಜಿಲ್ಲೆ, ಹಗರಿಬೊಮ್ಮನಹಳ್ಳಿ** ತಾಲೂಕಿನ, ಮಾಲವಿ ಜಲಾಶಯದ ಚಿಕ್ಕ ಕೆರೆಗಳಲ್ಲಿ, ಚಳಿಗಾಲದ ವಲಸೆ ಬಾನಾಡಿಗಳ ಕಲರವ.

<><><>

**ಈಗ ವಾರ್ತೆಗಳ ವಿವರ**

<><><>

**ಇಂದು ಮತ್ತು ನಾಳೆ,** ಬೆಳಗಾವಿಯಲ್ಲಿ ಆಯೋಜಿತ, 'ಗಾಂಧಿ ಭಾರತ' ಕಾರ್ಯಕ್ರಮಕ್ಕೆ ಕುಂದಾನಗರಿ ಸಜ್ಜುಗೊಂಡಿದೆ. ವೀರಸೌಧ ಹಾಗೂ ಸುವರ್ಣಸೌಧ ಎರಡೂ ಕಡೆಗಳಲ್ಲಿ, ವಿಶೇಷ ಕಾರ್ಯಕ್ರಮಗಳನ್ನು, ಪ್ರದೇಶ ಕಾಂಗ್ರೆಸ್ ಸಮಿತಿ ಆಯೋಜಿಸಿದೆ.

<><><>

**1924 ರಲ್ಲಿ ಮಹಾತ್ಮ ಗಾಂಧೀಜಿ** ಅಧ್ಯಕ್ಷತೆಯಲ್ಲಿ, ಟಿಳಕವಾಡಿಯಲ್ಲಿ ಕಾಂಗ್ರೆಸ್ ಸ್ವಾತಂತ್ರ್ಯ ಯೋಧರ ಅಧಿವೇಶನ ನಡೆದಿತ್ತು. ಗಾಂಧೀಜಿ ಅವರು, ಅಧ್ಯಕ್ಷತೆ ವಹಿಸಿದ್ದ ಏಕಮಾತ್ರ ಐತಿಹಾಸಿಕ ಅಧಿವೇಶನಕ್ಕೆ, ಇಂದಿಗೆ 100 ವರ್ಷ ಪೂರ್ಣಗೊಂಡವು.

<><><>

**ಇಂದು ಮಧ್ಯಾಹ್ನ 3 ಗಂಟೆಗೆ,** ವಿಸ್ತೃತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ, 'ನವ ಸತ್ಯಾಗ್ರಹ ಬೈಠಕ್' ನಡೆಯಲಿದೆ. 'ಜೈ ಬಾಪು, ಜೈ ಭೀಮ್, ಜೈ ಸಂವಿಧಾನ' ಜಾಥಾ ನಡೆಯಲಿದ್ದು, ಕಾಂಗ್ರೆಸ್‌ನ 200 ನಾಯಕರು ಪಾಲ್ಗೊಳ್ಳಲಿದ್ದಾರೆ.

<><><>

**ಎಂಟೂವರೆ ಕೋಟಿ ರೂಪಾಯಿ ವೆಚ್ಚದಲ್ಲಿ,** ಸುವರ್ಣ ವಿಧಾನಸೌಧದ ಮುಂದೆ ಪ್ರತಿಷ್ಠಾಪಿಸಲಾದ, ಗಾಂಧೀಜಿ ಅವರ ಪುತ್ಥಳಿಯನ್ನು, ನಾಳೆ ಬೆಳಗ್ಗೆ 10:30ಕ್ಕೆ ಉದ್ಘಾಟಿಸಲಾಗುತ್ತಿದೆ. ಬಳಿಕ 12.30ಕ್ಕೆ ಸಾರ್ವಜನಿಕ ಸಭೆ ನಡೆಯಲಿದೆ.

<><><>

**1924ರಲ್ಲಿ ಕಾಂಗ್ರೆಸ್ ಅಧಿವೇಶನ** ನಡೆದ ಜಾಗೆ, ವೀರಸೌಧದಲ್ಲಿ 10 ಲಕ್ಷ ರೂಪಾಯಿ ವೆಚ್ಚದ ಗಾಂಧಿ ಪ್ರತಿಮೆ ಸಹ ಅನಾವರಣಕ್ಕೆ ಸಿದ್ಧವಾಗಿದೆ. ಅಂದಿನ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿದ್ದ ಗಂಗಾಧರರಾವ್ ದೇಶಪಾಂಡೆ ಸ್ಮರಣಾರ್ಥ, ರಾಮತೀರ್ಥ ನಗರದಲ್ಲಿ ಸ್ಮಾರಕ ಭವನ ನಿರ್ಮಿಸಲಾಗಿದೆ. 35 ಲಕ್ಷ ರೂಪಾಯಿ ವೆಚ್ಚದ ಫೋಟೋ ಗ್ಯಾಲರಿ ಅನಾವರಣಗೊಳ್ಳಲಿದೆ.

<><><>

**ಕೆಪಿಸಿಸಿ ಅಧ್ಯಕ್ಷ** ಡಿ.ಕೆ.ಶಿವಕುಮಾರ, ತಮ್ಮ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

<><><>

**ಡಿ.ಕೆ.ಶಿವಕುಮಾರ ಧ್ವನಿ 30 ಸೆಕೆಂದುಗಳು**

<><><>

**ಗಾಂಧೀಜಿಯವರ ತತ್ವಾದರ್ಶಗಳನ್ನು** ದೇಶದ ಪ್ರತಿಯೊಬ್ಬರಿಗೂ ಪರಿಚಯಿಸುವ ಉದ್ದೇಶದೊಂದಿಗೆ, ಬೆಳಗಾವಿಯ 1924ರ ಕಾಂಗ್ರೆಸ್ ಮಹಾಧಿವೇಶನದ ಶತಮಾನೋತ್ಸವದ ಅಂಗವಾಗಿ, ರಾಜ್ಯ ಸರಕಾರ, ವರ್ಷಪೂರ್ತಿ 41 ಕಾರ್ಯಕ್ರಮಗಳನ್ನು ಆಯೋಜಿಸಲಿದೆ ಎಂದು, ಪ್ರವಾಸೋದ್ಯಮ ಖಾತೆ ಸಚಿವ ಎಚ್.ಕೆ. ಪಾಟೀಲ ತಿಳಿಸಿದ್ದಾರೆ. ಬೆಳಗಾವಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಅರ್ಥಪೂರ್ಣ ಕಾರ್ಯಕ್ರಮಗಳ ಮೂಲಕ, ಐತಿಹಾಸಿಕ ಅಧಿವೇಶನವನ್ನು, ಚಿರಸ್ಥಾಯಿಗೊಳಿಸಲಾಗುವುದು ಎಂದರು.

<><><>

**ದುಡಿಯುವ ವರ್ಗಗಳ ಮಹಿಳೆಯರ** ಆರ್ಥಿಕ ಸಬಲೀಕರಣಕ್ಕಾಗಿ, ಸ್ವ–ಸಹಾಯ ಗುಂಪಿನ ಮಹಿಳಾ ಕುಶಲಕರ್ಮಿಗಳು ತಯಾರಿಸಿದ ಉತ್ಪನ್ನಗಳು ಹಾಗೂ ಖಾದಿ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು, ಬೆಳಗಾವಿಯಲ್ಲಿ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ.

ಬೆಳಗಾವಿಯ ಸರ್ದಾರ್ ಹೈಸ್ಕೂಲ್ ಮೈದಾನದಲ್ಲಿ, ಇಂದಿನಿಂದ ಜನವರಿ 4ರ ವರೆಗೆ, "ಅಸ್ಮಿತೆ ವ್ಯಾಪಾರ ಮೇಳ–2024", ಬೆಳಗ್ಗೆ 9.30 ರಿಂದ ರಾತ್ರಿ 10.30ರ ವರೆಗೆ ಜರುಗಲಿದೆ ಎಂದು, ಕೌಶಲಾಭಿವೃದ್ಧಿ ಮತ್ತು ಜೀವನೋಪಾಯ ಖಾತೆ ಸಚಿವ ಶರಣಪ್ರಕಾಶ ಪಾಟೀಲ ತಿಳಿಸಿದ್ದಾರೆ.

ರಾಜ್ಯದ ಎಲ್ಲ ಜಿಲ್ಲೆಗಳ ಸ್ವ–ಸಹಾಯ ಗುಂಪಿನ ಮಹಿಳೆಯರು, 150 ಮಳಿಗೆಗಳಲ್ಲಿ ತಮ್ಮ ಜಿಲ್ಲೆಯ ಪ್ರಮುಖ ಉತ್ಪನ್ನಗಳನ್ನು ಇಲ್ಲಿ ಪ್ರದರ್ಶಿಸುತ್ತಿದ್ದಾರೆ.

<><><>

**ರಾಜ್ಯದಲ್ಲಿ ಕಳೆದ 8 ತಿಂಗಳ ಅವಧಿಯಲ್ಲಿ,** 730 ಜನ ತಾಯಂದಿರು, ಪ್ರಸವದ ನಂತರ, ಅನಾರೋಗ್ಯ ತೊಂದರೆಗೆ ಈಡಾಗಿ ಸರಣಿಯಲ್ಲಿ ಸಾವನ್ನಪ್ಪಲು, ಪ್ರಮಾಣಿತ ಕಾರ್ಯಾಚರಣೆ ವಿಧಾನ ಅನುಸರಿಸದ, ಆರೋಗ್ಯ ಇಲಾಖೆ ಅಧಿಕಾರಿಗಳ ಲೋಪವೇ ಕಾರಣ ಎಂಬ, ಆಘಾತಕಾರಿ ವಿಷಯ ಬೆಳಕಿಗೆ ಬಂದಿದೆ ಎಂದು, ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ ತಿಳಿಸಿದ್ದಾರೆ. ಎಕ್ಸ್ ಮಾಧ್ಯಮದಲ್ಲಿ ಈ ವಿಷಯ ಪ್ರಕಟಿಸಿರುವ ಅವರು, ತಾಯಂದಿರ ಜೀವ ಕಾಪಾಡಲು ಗಂಭೀರ ಕ್ರಮಗಳ ಅವಶ್ಯಕತೆ ಇದೆ ಎಂದು, ಮುಖ್ಯಮಂತ್ರಿಯವರನ್ನು ಆಗ್ರಹಿಸಿದ್ದಾರೆ.

<><><>

**ಈಗ ಜಾಹಿರಾತು..**

**ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(10 ಸೆಕೆಂದುಗಳು ದಿನದರ್ಶಿಕೆ)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ**

**ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.**

<><><>

**ಮಹಿಳೆಯರ ಘನತೆಯುಕ್ತ ಬದುಕು,** ಅಭಿವೃದ್ಧಿಯ ಮಾನದಂಡವಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಮಹಿಳೆಯರಿಗೆ ಘನತೆಯ ಬದುಕನ್ನು ಕಟ್ಟಿಕೊಡುವ ಹಾಗೂ ಶುಚಿತ್ವದ ವಾತಾವರಣ ನಿರ್ಮಿಸುವ ನಿಟ್ಟಿನಲ್ಲಿ, ಕೆ.ಐ.ಆರ್.ಡಿ.ಎಲ್. ಸಂಸ್ಥೆ, ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ, ಸುಸಜ್ಜಿತ ಆಧುನಿಕ ಸೌಲಭ್ಯಗಳುಳ್ಳ, ಸಮುದಾಯ ಶೌಚಾಲಯಗಳನ್ನು ನಿರ್ಮಿಸಿದೆ ಎಂದು, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ. ಉತ್ತಮ ಬೆಳಕು, ನಿರಂತರ ನೀರು, ಸುರಕ್ಷಿತ ವಾತಾವರಣ, ಶುಚಿತ್ವ ಕಾಪಾಡಲು ನಿಯಮಿತ ನಿರ್ವಹಣೆ, ತ್ಯಾಜ್ಯದ ವೈಜ್ಞಾನಿಕ ವಿಲೇವಾರಿಗೆ ಆಧುನಿಕ ವ್ಯವಸ್ಥೆ, ಇವು ವಿನೂತನ ಮಾದರಿ ಸಮುದಾಯ ಶೌಚಾಲಯಗಳ ವಿಶೇಷತೆ ಎಂದು, ಸಚಿವ ಖರ್ಗೆ ಹೇಳಿದ್ದಾರೆ.

<><><>

**ವಿಜಯನಗರ ಜಿಲ್ಲೆ, ಹಗರಿಬೊಮ್ಮನಹಳ್ಳಿ** ತಾಲೂಕಿನ, ಮಾಲವಿ ಜಲಾಶಯದ ಬಸಿದ ನೀರು ಸಂಗ್ರಹಗೊಂಡ, ಚಿಕ್ಕ ಕೆರೆಗಳಲ್ಲಿ ವಲಸೆ ಬಾನಾಡಿಗಳು ಚಳಿಗಾಲ ಕಳೆಯಲು ಆಗಮಿಸಿ, ವಿರಮಿಸುತ್ತಿವೆ. ಪಕ್ಷಿ ವೀಕ್ಷಕ ವಿಜಯ ಇಟಗಿ ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ವಿಜಯ ಇಟಗಿ ಧ್ವನಿ 40 ಸೆಕೆಂದುಗಳು

<><><>

**ಜಮ್ಮು ಕಾಶ್ಮೀರದ ಪೂಂಚ್ ವಲಯದಲ್ಲಿ ಸಂಭವಿಸಿದ,** ಸೇನಾ ವಾಹನ ಅಪಘಾತದಲ್ಲಿ, ಮೃತಪಟ್ಟ ಐವರು ಯೋಧರ ಪೈಕಿ, ಮೂವರು ಕರ್ನಾಟಕದವರಾಗಿದ್ದಾರೆ. ಸೇನಾ ವಾಹನ ಹಿಮದಿಂದಾಗಿ ಜಾರಿ, 300 ಅಡಿ ಕಂದಕಕ್ಕೆ ಬಿದ್ದ ಪರಿಣಾಮ, ಮರಾಠಾ ರೆಜಿಮೆಂಟಿನ ಐವರು ಯೋಧರು ಹುತಾತ್ಮರಾಗಿದ್ದಾರೆ. ಬೆಳಗಾವಿಯ ಪಂತ ಬಾಳೆಕುಂದ್ರಿಯ ದಯಾನಂದ ತಿರಕಣ್ಣವರ್, ಉಡುಪಿಯ ಬೀಜಾಡಿ ನಿವಾಸಿ ಅನೂಪ್ ಮತ್ತು ಬಾಗಲಕೋಟೆಯ ಮಹೇಶ್ ಮರಿಗೊಂಡ ಎಂದು ಗುರುತಿಸಲಾಗಿದೆ. ಪಾರ್ಥಿವ ಶರೀರಗಳನ್ನು ಇಂದು ಸ್ವಗ್ರಾಮಗಳಿಗೆ ತರಲಾಗುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸಂತಾಪ ವ್ಯಕ್ತ ಪಡಿಸಿದ್ದಾರೆ. ಸಕಲ ಸರ್ಕಾರಿ ಗೌರವಗಳೊಂದಿಗೆ, ಪಾರ್ಥಿವ ಶರೀರಗಳ ಅಂತ್ಯಕ್ರಿಯೆ ಇಂದು ನಡೆಯಲಿದೆ.

<><><>

**ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲೂಕು,** ಜಂಬೂರು ಗ್ರಾಮದ ಈಶ್ವರ್ ಅಪಘಾತದಲ್ಲಿ ಮೃತಪಟ್ಟ ಹಿನ್ನೆಲೆ, ಅವರ ಕುಟುಂಬಸ್ಥರು, ಮೃತರ ಮೂಳೆಗಳನ್ನು ದಾನ ಮಾಡಿದ್ದಾರೆ. ರಾಜ್ಯದಲ್ಲಿ ಇದೇ ಮೊದಲ ಬಾರಿಗೆ, ಮೂಳೆ ದಾನ ಮಾಡಲಾಗಿದೆ. ಕ್ಯಾನ್ಸರ್ ಪೀಡಿತ 6 ಮಕ್ಕಳ ಬಾಳು ಬೆಳಗಲಿದೆ. ಕುಟುಂಬಸ್ಥರ ಮಾನವೀಯ ಮತ್ತು ಅನುಕರಣೀಯ ಕಾರ್ಯಕ್ಕೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶ್ಲಾಘಿಸಿದ್ದು, ಅಂಗಾಂಗ ದಾನದ ಪ್ರಕ್ರಿಯೆಗೆ notto.abdm.gov.in ಮೂಲಕ, ಹೆಸರು ನೋಂದಾಯಿಸಲು, ಮನವಿ ಮಾಡಿದೆ.

<><><>

**ಬೆಂಗಳೂರಿನ ಖ್ಯಾತ ಅಭಿವೃದ್ಧಿಪರ ಚಿಂತಕ,** ವೈದ್ಯ ಆರ್. ಬಾಲಸುಬ್ರಮಣ್ಯಂ ಅವರ, ಪ್ರಧಾನಮಂತ್ರಿ ಮೋದಿ ಅವರ ನೇತೃತ್ವ ಕೌಶಲ ಆಧಾರಿತ, 'ಪವರ್ ವಿದಿನ್' ಗ್ರಂಥದ ಲೋಕಾರ್ಪಣೆ ಹಾಗೂ ಲೇಖಕರೊಂದಿಗೆ ಸಂವಾದ ಕಾರ್ಯಕ್ರಮ, ಇಂದು ಸಂಜೆ 6 ಗಂಟೆಗೆ, ಧಾರವಾಡದ ಆಲೂರು ವೆಂಕಟರಾವ ಸಭಾಭವನದಲ್ಲಿ ಆಯೋಜಿತವಾಗಿದೆ ಎಂದು, ನೇಚರ್ ರಿಸರ್ಚ್ ಸೆಂಟರ್ ಕಾರ್ಯಾಧ್ಯಕ್ಷ ಪಂಚಾಕ್ಷರಿ ಹಿರೇಮಠ ತಿಳಿಸಿದ್ದಾರೆ. ಕೇಂದ್ರದ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಬೆಂಗಳೂರಿನ ಚಾಣಕ್ಯ ವಿಶ್ವವಿದ್ಯಾಲಯದ ಡೀನ್ ಚೇತನ ಸಿಂಗಾಯಿ, ಕೃತಿ ಪರಿಚಯಿಸಲಿದ್ದು, ಧಾರವಾಡದ ಭಾರತೀಯ ತಂತ್ರಜ್ಞಾನ ಸಂಸ್ಥೆ ನಿರ್ದೇಶಕ ವೆಂಕಪ್ಪಯ್ಯ ದೇಸಾಯಿ ಅಧ್ಯಕ್ಷತೆ ವಹಿಸಲಿದ್ದಾರೆ, ಎಂದರು.

<><><>

**ವರ ಕವಿ ದ.ರಾ.ಬೇಂದ್ರೆಯವರ,** ಬದುಕು ಮತ್ತು ಬರೆಹಗಳ ಆಧಾರಿತ, ರಾಜೇಂದ್ರ ಕಾರಂತ ನಿರ್ದೇಶನದ, 'ಗಂಗಾವತರಣ' ನಾಟಕ, ಇಂದು ಸಂಜೆ 6 ಗಂಟೆಗೆ, ಧಾರವಾಡದ ಸೃಜನಾ ರಂಗಮಂದಿರದಲ್ಲಿ ಪ್ರದರ್ಶನಗೊಳ್ಳಲಿದೆ. ಧಾರವಾಡದ ಸ್ನೇಹ ಪ್ರತಿಷ್ಠಾನ, ಜಿ.ಬಿ.ಜೋಶಿ ಮೆಮೋರಿಯಲ್ ಟ್ರಸ್ಟ್, ಸಿರೂರ ರಂಗಮಂದಿರ ಪ್ರತಿಷ್ಠಾನ ಹಾಗೂ ರಂಗ ಸೌರಭ ನಾಟಕ ಪ್ರದರ್ಶನ ಆಯೋಜಿಸಿವೆ.

<><><>

**ಸ್ವಾಮಿ ವಿವೇಕಾನಂದರು,** ಕನ್ಯಾಕುಮಾರಿಯ ಬಂಡೆಯ ಮೇಲೆ ಕುಳಿತು, ತಪಗೈದ ದಿನದ ಹಿನ್ನೆಲೆ, ವಿವೇಕ ಮಾಲಾಧಾರಣೆ ಕಾರ್ಯಕ್ರಮ, ಬೆಂಗಳೂರು ಸೇರಿದಂತೆ, ರಾಜ್ಯದ ವಿವಿಧೆಡೆ ಶ್ರದ್ಧಾ ಭಕ್ತಿಯಿಂದ ನಡೆಯಿತು. ಬೆಂಗಳೂರಿನಲ್ಲಿ ರಾಮಕೃಷ್ಣ ಸೇವಾ ಟ್ರಸ್ಟ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ, ನೂರು ಜನ ಯುವಜನರು ಭಾಗವಹಿಸಿ, ವಿವೇಕ ಮಾಲೆ ಧರಿಸಿದರು.

<><><>

**ಆಕಾಶವಾಣಿಯ ಮಾಸಿಕ ಜನಪ್ರಿಯ ಕಾರ್ಯಕ್ರಮ, 'ಮನ್ ಕಿ ಬಾತ್'** ನಲ್ಲಿ ಇದೇ 29 ರಂದು, ಪ್ರಧಾನಮಂತ್ರಿ ನರೇಂದ್ರ ಮೋದಿ, ದೇಶ, ವಿದೇಶಗಳಲ್ಲಿನ ಭಾರತೀಯರೊಂದಿಗೆ ತಮ್ಮ ಚಿಂತನೆಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಮನದ ಮಾತಿನ 117ನೇ ಆವೃತ್ತಿಯಾಗಿದೆ. ಸಾರ್ವಜನಿಕರು 'ನರೇಂದ್ರ ಮೋದಿ ಆ್ಯಪ್' ಅಥವಾ 'ಮೈ ಗೌವ್ ಓಪನ್ ಫೋರಂ'ನಲ್ಲಿ ನಾಳೆಯ ವರೆಗೆ, ಅಭಿಪ್ರಾಯಗಳನ್ನು ತಿಳಿಸಬಹುದಾಗಿದೆ.

<><><>

**ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು,** ಇಂದು 17 ಜನರಿಗೆ, ರಾಷ್ಟ್ರೀಯ ಬಾಲ ಪುರಸ್ಕಾರಗಳನ್ನು ಪ್ರದಾನ ಮಾಡಲಿದ್ದಾರೆ. 'ರಾಷ್ಟ್ರೀಯ ಬಾಲ ದಿವಸ್' ಕಾರ್ಯಕ್ರಮದಲ್ಲಿ, ಪ್ರಧಾನಮಂತ್ರಿ ಪಾಲ್ಗೊಳ್ಳಲಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಬೆಳಗಾವಿಯಲ್ಲಿ ಇಂದು,** ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ, ‘ನವ ಸತ್ಯಾಗ್ರಹ ಬೈಠಕ್’ ಹಾಗೂ ‘ಜೈ ಬಾಪು, ಜೈ ಭೀಮ್, ಜೈ ಸಂವಿಧಾನ’ ಜಾಥಾ.
- **ದುಡಿಯುವ ವರ್ಗಗಳ ಮಹಿಳೆಯರ** ಆರ್ಥಿಕ ಸಬಲೀಕರಣಕ್ಕಾಗಿ, “ಅಸ್ಮಿತೆ ವ್ಯಾಪಾರ ಮೇಳ”.
- **ಮಹಿಳೆಯರ ಘನತೆಯ ಬದುಕು,** ಅಭಿವೃದ್ಧಿಯ ಮಾನದಂಡ – ಸಚಿವ ಪ್ರಿಯಾಂಕ್ ಖರ್ಗೆ.
- ವಿಜಯನಗರ ಜಿಲ್ಲೆ, ಹಗರಿಬೊಮ್ಮನಹಳ್ಳಿ ತಾಲೂಕಿನ, ಮಾಲವಿ ಜಲಾಶಯದ ಚಿಕ್ಕ ಕೆರೆಗಳಲ್ಲಿ, ಚಳಿಗಾಲದ ವಲಸೆ ಬಾನಾಡಿಗಳ ಕಲರವ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ